# ಇತಿಹಾಸದ ನೈಜದಾಖಲೆಗೆ ಕ್ರಮ: ಮೈ.ಚ. ಜಯದೇವ

**ವಿಕ ಸುದ್ದಿಲೋಕ**

**ಬೆಂಗಳೂರು:** 'ಭಾರತದ ಇತಿಹಾಸದಲ್ಲಿ ಕೆಲವು ಅಸತ್ಯಗಳು ದಾಖಲಾಗಿವೆ. ಇವುಗಳನ್ನು ಸರಿಯಾದ ಕ್ರಮದಲ್ಲಿ ದಾಖಲಿಸುವ ಕೆಲಸವನ್ನು ಮಿಥಿಕ್ ಸೊಸೈಟಿ ಮಾಡಲಿದೆ' ಎಂದು ದಿ ಮಿಥಿಕ್ ಸೊಸೈಟಿಯ ವ್ಯವಸ್ಥಾಪಕ ಸಮಿತಿಯ ಹಿರಿಯ ಸದಸ್ಯ ಮೈ.ಚ. ಜಯದೇವ ಹೇಳಿದರು.

ಮಿಥಿಕ್ ಸೊಸೈಟಿಯಲ್ಲಿ ಮಂಗಳವಾರ ನಡೆದ ಶತಮಾನೋತ್ಸವ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಭಾರತ ಇತಿಹಾಸದ ಕೆಲವು ಮಹತ್ವದ ಅಂಶಗಳನ್ನು ತಪ್ಪಾಗಿ ಉಲ್ಲೇಖಿಸಲಾಗಿದೆ. ಮುಂದಿನ ಪೀಳಿಗೆಗೆ ತಪ್ಪು ಮಾಹಿತಿ ಹೋಗುವ ಅಪಾಯವಿದೆ. ಹೀಗಾಗಿ, ಇತಿಹಾಸವನ್ನು ಇದ್ದಂತೆ ದಾಖಿಸುವ ಪುಸ್ತಕಗಳನ್ನು ಮಿಥಿಕ್ ಸೊಸೈಟಿ ಪ್ರಕಟಿಸಲಿದೆ ಎಂದು ವಿವರಿಸಿದರು.





'ಮಿಥಿಕ್ ಸೊಸೈಟಿ ಶತಮಾನೋತ್ಸವ ಕಾರ್ಯಕ್ರಮ'ದ ಸಮಾರೋಪದಲ್ಲಿ ಡಾ.ಎಂ.ಚಿದಾನಂದಮೂರ್ತಿ, ಡಾ.ವಿಜಯಲಕ್ಷ್ಮಿ ಬಾಳೆಕುಂದ್ರಿ, ಡಾ.ಎಸ್.ಎಸ್. ರಾಜಾರಾಂ, ವಿದ್ವಾನ್ ಎಸ್.ರಂಗನಾಥ ಶರ್ಮ, ಡಾ.ಶತಾವಧಾನಿ ಗಣೇಶ್, ಎಸ್. ಆರ್.ರಾಮಸ್ವಾಮಿ ಮತ್ತು ಕೆ.ಎಂ.ಮೈತ್ರಿ ಅವರನ್ನು ಸನ್ಮಾನಿಸಲಾಯಿತು(ಎಡಚಿತ್ರ). ಡಾ.ಜಿ.ಬಿ.ಹರೀಶ್, ಅಂಕಣಕಾರ ಪ್ರತಾಪ್ ಸಿಂಹ, ಶ್ರೀನಿವಾಸನ್, ಡಾ.ಬಿ.ವಿ. ವಸಂತಕುಮಾರ್, ಟಿ.ಆರ್. ಶಿವಪ್ರಸಾದ್, ಡಾ.ಕೆ.ಸೌಭಾಗ್ಯವತಿ ಮತ್ತು ಡಾ.ಎಚ್. ನಾಗಮಣಿ ಅವರಿಗೆ ಯುವ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು(ಬಲಚಿತ್ರ).

**ಡಿಪ್ಲೊಮಾ ತರಗತಿ**

ಭಾರತದ ಇತಿಹಾಸ, ಸಂಸ್ಕೃತಿ, ಪರಂಪರೆ ಇತ್ಯಾದಿಗಳನ್ನು ಒಳಗೊಂಡ ಇಂಡಾಲಜಿಯಲ್ಲಿ ಡಿಪ್ಲೊಮಾ ತರಗತಿಗಳನ್ನು ಮಿಥಿಕ್ ಸೊಸೈಟಿ ಸದ್ಯದಲ್ಲೇ ಏರ್ಪಡಿಸಲಿದೆ. ಜತೆಗೆ, ಸೊಸೈಟಿಯ ಗ್ರಂಥಾಲಯವನ್ನು ಡಿಜಿಟೈಸ್ ಮಾಡಿ, ಪುಸ್ತಕಗಳ ಲಾಭ ಹೆಚ್ಚು ಜನರಿಗೆ ಸಿಗುವಂತೆ ನೋಡಿಕೊಳ್ಳುತ್ತೇವೆ. ಸೊಸೈಟಿ ಸಾಗಿ ಬಂದ ಹಾದಿಯನ್ನು ಸ್ಥೂಲವಾಗಿ ಕಟ್ಟಿಕೊಡುವ ಪುಟ್ಟ ಸಂಗ್ರಹಾಲಯವನ್ನು ಸ್ಥಾಪಿಸಲು ತೀರ್ಮಾನಿಸಲಾಗಿದೆ ಎಂದು ಜಯದೇವ ತಿಳಿಸಿದರು.

**ಸಂಶೋಧಕರಿಗೆ ಪ್ರೋತ್ಸಾಹ**

ಭಾರತದ ಇತಿಹಾಸ ಕುರಿತು ಸಂಶೋಧನೆ ನಡೆಸುವವರಿಗೆ ಮಿಥಿಕ್ ಸೊಸೈಟಿ ಅಗತ್ಯ ಪ್ರೋತ್ಸಾಹ ನೀಡಲು ಸಿದ್ಧವಿದೆ. ಜತೆಗೆ, ಅಧ್ಯಯನಶೀಲ ಸಂಶೋಧಕರಿಗೆ ಅತಿಥಿ ಗೃಹವನ್ನು ನಿರ್ಮಿಸಲಾಗುತ್ತದೆ. ಇತಿಹಾಸವನ್ನು ಉಳಿಸಿಕೊಂಡು ಕಾಲಕ್ಕೆ ತಕ್ಕಂತೆ 'ಸೊಸೈಟಿ' ಹೆಜ್ಜೆ ಹಾಕಲಿದೆ ಎಂದರು.

ಡಾ.ಕೆ.ಎನ್. ದೀಕ್ಷಿತ್, ಸಚಿವರಾದ ಮುಮ್ತಾಜ್ ಅಲಿ ಖಾನ್, ರಾಮಚಂದ್ರ ಗೌಡ, ಶತಮಾನೋತ್ಸವ ಸಮಿತಿ ಅಧ್ಯಕ್ಷ ನ್ಯಾ.ಎಂ. ರಾಮಕೃಷ್ಣ ಡಾ.ಎಂ.ಕೆ.ಎಲ್.ಎನ್. ಶಾಸ್ತ್ರಿ ಉಪಸ್ಥಿತರಿದ್ದರು.

**ಪುಸ್ತಕ ಬಿಡುಗಡೆ**

ಇದೇ ಸಂದರ್ಭದಲ್ಲಿ 'ಭಾರತೀಯ ಸಂಸ್ಕೃತಿ ಮತ್ತು ಮಹಿಳೆ', 'ಸೆಂಚುರಿ ಆಫ್ ಮಿಥಿಕ್ ಸೊಸೈಟಿ' ಪುಸ್ತಕಗಳನ್ನು ಲೋಕಾರ್ಪಣೆ ಮಾಡಲಾಯಿತು.